# ಹೊಸತು



## ಸಿಲ್ವನ್ ಹೋಮ್ ಆಟೊಮೇಷನ್

ಆಧುನಿಕ ಜೀವನಶೈಲಿಗೆ ಆತುಕೊಳ್ಳುವವರಿಗಾಗಿ ಸಿಲ್ವನ್ ಕಂಪೆನಿ ಹೊಸ ಆಟೊಮೇಷನ್ ತಂತ್ರಜ್ಞಾನವನ್ನು ತಂದಿದೆ. ಮೊಬೈಲ್ ಫೋನ್ ಅಥವಾ ಟ್ಯಾಬ್ಲೆಟ್ ಬಟನ್ ಒತ್ತುವ ಮೂಲಕ ಈ ತಂತ್ರಜ್ಞಾನವನ್ನು ಸುಲಭವಾಗಿ ಬಳಸಬಹುದು. ಮಧ್ಯಮ ವರ್ಗದವರು ಹೊಸ ಮನೆ ಕೊಳ್ಳುವುದೋ ಅಥವಾ ಮನೆಯನ್ನು ಪುನರ್ ನಿರ್ಮಾಣ ಮಾಡಬಯಸುವವರು ಈ ಹೋಮ್ ಆಟೊಮೇಷನ್ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಬಹುದು.

ಹೆಚ್ಚಿನ ಸಮಯ ಕಚೇರಿಯಲ್ಲೋ, ಮನೆಯಿಂದ ಹೊರಗಡೆ ಇದ್ದರೂ ಈ ತಂತ್ರಜ್ಞಾನದಿಂದ ಮನೆಯೊಳಗೆ ಏನಾಗುತ್ತಿದೆ ಎಂಬುದನ್ನು ತಿಳಿದುಕೊಳ್ಳಬಹುದು, ಮನೆಯಿಂದ ದೂರ ಇದ್ದರೂ ಕುಳಿತಲ್ಲಿಂದಲೇ ಮನೆಯೊಳಗಿನ ಕಾರ್ಯವೈಖರಿಯನ್ನು ನಿರ್ವಹಣೆ ಮಾಡಬಹುದು. ಮನೆಯ ಭದ್ರತೆ, ಲೈಟ್ಸ್, ಸ್ವಿಚ್‌ಗಳು ಎಲ್ಲವನ್ನೂ ದೂರದಿಂದಲೇ ನಿರ್ವಹಿಸಬಹುದು. ಹಣ, ಸಮಯ ಉಳಿತಾಯ, ಅಡುಗೆ ಮನೆ ಸುರಕ್ಷತೆ ಎಲ್ಲವೂ ಇದರಿಂದ ಸಾಧ್ಯ.

ಸಿಲ್ವನ್ ಇನ್ನೊವೇಷನ್ ಲ್ಯಾಬ್ ಬೆಂಗಳೂರಿನ ಇಂದಿರಾನಗರದಲ್ಲಿದೆ. ಈ ತಂತ್ರಜ್ಞಾನವನ್ನು ಮನೆಯಲ್ಲಿ ಅಳವಡಿಸಿಕೊಳ್ಳಲು 25 ಸಾವಿರ ರೂಪಾಯಿಯಿಂದ 5 ಲಕ್ಷ ರೂಪಾಯಿವರೆಗೆ ವೆಚ್ಚ ತಗಲುತ್ತದೆ.

ವಿವರಕ್ಕೆ: ಹನ್ನಾಲಿ– 9986632121

## ಕಲರ್‌ಕೇರ್ ಲಿಪ್‌ಸ್ಟಿಕ್




ಕಲರ್‌ಕೇರ್ ಲಂಡನ್ ಹೊಸ ಶೇಡ್‌ನ ಲಿಪ್‌ಸ್ಟಿಕ್ ಒಂದನ್ನು ಬಿಡುಗಡೆ ಮಾಡಿದೆ. ಇದು ತೇವಾಂಶದಿಂದ ಕೂಡಿದ್ದು ದಿನವಿಡೀ ತುಟಿಯಿಂದ ಅಳಿಸದೇ ಹಾಗೇ ಉಳಿಯುತ್ತದೆ. 'ಮೆಟ್ರೊ ರೆಡ್' ಹೆಸರಿನ ಈ ಹೊಸ ಶೇಡ್ ಶಿಯಾ ಬಟರ್, ಆಲಿವ್ ಆಯಿಲ್, ವಿಟಮಿನ್ ಇ ಯಿಂದ ಸಮೃದ್ಧವಾಗಿದೆ ಎಂಬುದು ಕಂಪೆನಿ ವಿವರಣೆ. ಇದು ತುಟಿಗಳನ್ನು ನಯವಾಗಿಸಿ, ಹೊಳಪು ಬರುವಂತೆ ಮಾಡುತ್ತದೆ. ಬೆಲೆ 195 ರೂಪಾಯಿ.




## ಡಿಸ್ನಿ ವಾಚು, ಸನ್‌ಗ್ಲಾಸ್

ಮಕ್ಕಳಿಗೆ ಪ್ರಿಯವಾದ ಡಿಸ್ನಿ ಇದೀಗ 'ಮಿಕ್ಕಿ ಅಂಡ್ ಫ್ರೆಂಡ್ಸ್' ಹೆಸರಿನಲ್ಲಿ ಕೆಲವೊಂದು ಉತ್ಪನ್ನಗಳನ್ನು ಮಕ್ಕಳಿಗಾಗಿ ಹೊರತಂದಿದೆ. ಇದರಲ್ಲಿ ವಾಚು, ಆಟಿಕೆಗಳು, ಬಟ್ಟೆ, ಚಪ್ಪಲಿ, ಸನ್‌ಗ್ಲಾಸ್, ಜ್ಯುವೆಲ್ಲರಿ, ಬೈಸಿಕಲ್, ಕ್ರೀಡಾ ಸಾಮಗ್ರಿ, ವಾಟರ್ ಬಾಟಲಿ, ಲಂಚ್ ಬಾಕ್ಸ್, ಬ್ಯಾಗ್, ಟ್ರಾಲಿ ಮುಂತಾದ ಉತ್ಪನ್ನಗಳಿವೆ.

ಶಾಪರ್ಸ್ ಸ್ಟಾಪ್, ಮ್ಯಾಕ್ಸ್, ಬಿಗ್‌ಬಜಾರ್ ಮುಂತಾದ ಮಳಿಗೆಗಳಲ್ಲಿ ಸಿಗುತ್ತದೆ. ಬೆಲೆ 49 ರೂಪಾಯಿಗಳಿಂದ ಆರಂಭ.

ವಿವರಕ್ಕೆ: 9619691940



## ರೂಷ್‌ನಿಂದ ಮದುವೆ ಶೂ ಸಂಗ್ರಹ

ವೈವಿಧ್ಯಮಯ ಶೂಗಳ ಸಂಗ್ರಹಕ್ಕೆ ಹೆಸರಾದ ಅಮೆರಿಕ ಮೂಲದ ರೂಷ್ ಕಂಪೆನಿ ಇದೀಗ ಮದುವೆ ಗಂಡಿಗಾಗಿಯೇ ವಿಶೇಷವಾಗಿ ವಿನ್ಯಾಸ ಮಾಡಿದ ಶೂಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ಧರಿಸಲು ಆರಾಮದಾಯಕವಾಗಿದ್ದು, ಬಣ್ಣಗಳ ಸಂಯೋಜನೆ ಕೂಡ ಆಕರ್ಷಕವಾಗಿದೆ. ಮೆರೂನ್ ಶೇಡ್‌ನ ಶೂ ನಲ್ಲಿ ಜೇನಿನ ಬಣ್ಣದ ಸೋಲ್ ಇದ್ದು, ಶೆರ್ವಾನಿ ಮುಂತಾದ ಸಂಪ್ರದಾಯಿಕ ಉಡುಗೆ ತೊಡುವ ಮದುವೆಯ ಶುಭ ಸಂದರ್ಭಕ್ಕೆ ಸೂಕ್ತವಾಗಿದೆ ಎಂಬುದು ಕಂಪೆನಿ ಕೊಡುವ ವಿವರಣೆ.

ಬೆಲೆ 4,690 ರೂಪಾಯಿ. ಎಲ್ಲ ಪ್ರಮುಖ ಮಳಿಗೆಗಳಲ್ಲಿ ಸಿಗುತ್ತದೆ.

ಮಾಹಿತಿಗೆ: 080-67266472